## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

ಸಿ.ಸಿ ನಂ. 122/2025

ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 5

| | | |
|---|---|---|
| ಸಾಕ್ಷಿದಾರಳ ಹೆಸರು | : | ಹೇಮಾ ಯೋಗೇಶ ಮೊಗೇರ |
| ಗಂಡನ ಹೆಸರು | : | ಯೋಗೇಶ ಮೊಗೇರ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಹೊಟೇಲ್ ನಲ್ಲಿ ಬಿಲ್ಲಿಂಗ ಕೆಲಸ |
| ವಾಸ | : | ತೂದಳ್ಳಿ, ಭಟ್ಕಳ |

ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 15-12-2025

ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,

ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನಾನು ಗುರುತಿಸುತ್ತೇನೆ. ಅದೇ ರೀತಿ ವಿನಾಯತಿ ಗೈರು ಹಾಜರಿರುವ 3 ಮತ್ತು 4 ನೇ ಆರೋಪಿತರನ್ನು ನಾನು ಗುರುತಿಸುತ್ತೇನೆ. ಚಾಸಾ-4 ರವರು ನನಗೆ ಗಂಡನಾಗಬೇಕು. ಚಾಸಾ-5 ರವರು ಪರಿಚಯ ನನಗೆ ಇರುತ್ತದೆ.

ದಿನಾಂಕ 24.11.2024 ರಂದು ನನ್ನ ಗಂಡ ಚಾಸಾ-1 ರವರು ಅಟೋ ಬಾಡಿಗೆ ಕೆಲಸಕ್ಕೆ ಹೋಗಿ ಮನೆಗೆ ಬೆಳಿಗ್ಗೆ 9.30 ಬಂದು ಮತ್ತೇ ಬೆಳಿಗ್ಗೆ 11.30 ಗಂಟೆಗೆ ಬಾಡಿಗೆ ಮಾಡಲು ಅಟೋವನ್ನು ತೆಗೆದುಕೊಂಡು ಅಟೋ ಸ್ಟ್ಯಾಂಡಿಗೆ ಹೋಗಿದ್ದರು. ಆಗ ಆರೋಪಿತರು ನನ್ನ ಗಂಡ ಚಾಸಾ-1 ರವರ ಅಟೋವನ್ನು ಅಡ್ಡಗಟ್ಟಿ ನಿಲ್ಲಿಸಿದ್ದರು, ಅದಕ್ಕೆ ಚಾಸಾ-1 ರವರು ಏಕೆ ಅಡ್ಡಗಟ್ಟಿ ಅಟೋವನ್ನು ನಿಲ್ಲಿಸಿದಿರಿ ಎಂದು ಕೇಳಿದ್ದಕ್ಕೆ 2 ರಿಂದ 4 ನೇ ಆರೋಪಿತರು ಕೈಗಳಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿದರು. ಈ ಪ್ರಕರಣದ ಸಂಘರ್ಷಕ್ಕೆ ಒಳಗಾದ ಬಾಲಕ ಕಟ್ಟಿಗೆಯಿಂದ ಚಾಸಾ-1 ರವರ ಬಾಯಿ ಮೇಲೆ ಹಲ್ಲೆ ಮಾಡಿ ರಕ್ತ ಬರುವಂತೆ ಗಾಯಗೊಳಿಸಿದ. ಆಗ ನನ್ನ ಗಂಡ ಕಿರುಚಾಡಿದ್ದಕ್ಕೆ ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿತರು ಈಗ ಉಳಿದುಕೊಂಡಿರುವೆ, ನಿನ್ನನ್ನು ಕೊಲೆ ಮಾಡುತ್ತೇವೆ ಕೊಲೆ ಬೆದರಿಕೆ ಹಾಕಿ ಹೋಗಿರುತ್ತಾರೆ. ಅದಕ್ಕೆ ನಾನು ಮತ್ತು ಚಾಸಾ-5 ರವರು ಅಟೋದಲ್ಲಿ ಚಾಸಾ-1 ರವರಿಗೆ ಶಿರಾಲಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಭಟ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಚಾಸಾ-1 ರವರು ಸದ್ರಿ ಆಸ್ಪತ್ರೆಯಲ್ಲಿ ನಾಲ್ಕು ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ.

ನಂತರ ನಾವು ಆದರ್ಶ ಆಸ್ಪತ್ರೆಗೆ ಚಾಸಾ–1 ರವರನ್ನು ಕರೆದುಕೊಂಡು ಹೋಗಿ ಅಲ್ಲಿಂದ ಚಾಸಾ–1 ರವರನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆ ಮತ್ತು ಚಾಸಾ–1 ರವರ ಅಂಗಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಒಂದು ಕಟ್ಟಿಗೆ ಮತ್ತು ಒಂದು ಬಿಳಿ ಬಣ್ಣದ ಬಟ್ಟೆಯನ್ನು ತೋರಿಸಲಾಯಿತು. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಎಮ್ ಓ 1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಎಫ್ ಜಿ ವಕೀಲರಿಂದಃ**

ಘಟನೆಯ ದಿನಾಂಕ 24.11.2024 ರಂದು ಆಗಿರುತ್ತದೆ. ದೂರನ್ನು ದಿನಾಂಕ 25.11.2024 ರಂದು ದಾಖಲಿಸಿರುತ್ತೇವೆ. ಪೊಲೀಸರು ಭಟ್ಕಳ ಸರಕಾರಿ ಆಸ್ಪತ್ರೆಗೆ ಬಂದು ಚಾಸಾ–1 ರವರಿಂದ ದೂರು ಪಡೆದಿರುತ್ತಾರೆ. ದೂರನ್ನು ನನ್ನ ಕೈಬರಹದಿಂದ ನಾನೇ ಬರೆದಿರುತ್ತೇನೆ. ದೂರು ಬರೆಯಲು ಚಾಸಾ–1 ಮತ್ತು ಪೊಲೀಸರು ಮಾಹಿತಿ ಕೊಟ್ಟಿರುತ್ತಾರೆ.

ಘಟನೆ ನಡೆಯಿತು ಎಂದು ದಿನ ಮತ್ತು ಸಮಯದಂದು ನಾನು ಮನೆಯಲ್ಲಿದ್ದೆ ಎಂದರೆ ಸರಿ. ಘಟನೆಯು ವೀರ ಮಾಸ್ತಿ ದೇವಸ್ಥಾನದ ಎದುರುಗಡೆ, ರವಿ ಸುಕ್ರಾ ಮೊಗೇರ ಎಂಬವರ ಬಾವಿ ಹತ್ತಿರ ಆಗಿರುತ್ತದೆ. ರವಿ ಸುಕ್ರಾ ಮೊಗೇರ ಎಂಬವರ ಮನೆಯಿಂದ ನಮ್ಮ ಮನೆ 20–30 ಅಡಿ ಅಂತರದಲ್ಲಿರುತ್ತದೆ. ಘಟನೆಯನ್ನು ರವಿ ಸುಕ್ರಾ ಮೊಗೇರರವರ ಮನೆಯವರು ನೋಡಿರುವುದಿಲ್ಲ. ಘಟನೆ ನಡೆದ ಸ್ಥಳದ ಮನೆಯ ಅಕ್ಕಪಕ್ಕ ಮಾದೇವಿ ನಾಗಯ್ಯ ಮೊಗೇರ, ವೆಂಕಟರಮಣ ಮೊಗೇರ ಹಾಗೂ ಸಾವಿತ್ರಿ ಶ್ರೀಧರ ಮೊಗೇರ ಎಂಬವರ ಮನೆಗಳಿರುತ್ತವೆ ಎಂದರೆ ಸರಿ. ಮೇಲೆ ಹೇಳಿದವರ ಪೈಕಿ
ಸಾವಿತ್ರಿ ಶ್ರೀಧರ ಮೊಗೇರರವರು ಘಟನೆಯನ್ನು ನೋಡಿರುತ್ತಾರೆ.

ಈ ಪ್ರಕರಣದ ಆರೋಪಿತರು ಸಹ ನನ್ನ ಮತ್ತು ನನ್ನ ಗಂಡನ ಮೇಲೆ ಪ್ರತಿಕೂಲ ಪ್ರಕರಣ ದಾಖಲಿಸಿ ಅದು ಈ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. ಆರೋಪಿತರು ದೂರು ನೀಡಿದ ಒಂದು ದಿನದ ನಂತರ ನಾವು ದೂರು ನೀಡಿದ್ದೇವೆ ಎಂದರೆ ಸರಿ. ನನ್ನ ಹೇಳಿಕೆ ದಿನಾಂಕ 02.12.2024 ರ 2 ನೇ ಪ್ಯಾರಾದಲ್ಲಿ ಆರೋಪಿತರು ಬೇರೆ ಒಂದು ಪ್ರಕರಣದಲ್ಲಿ ನಮ್ಮ ವಿರುದ್ಧ ಸುಳ್ಳು ಸಾಕ್ಷಿ ನುಡಿದಿದ್ದರು ಎಂದು ಹೇಳಿಕೆಯಲ್ಲಿ ಬರೆದಿರುವುದು ಸರಿ ಇರುತ್ತದೆ.

ನಾವು ಶಿರಾಲಿ ಸರಕಾರಿ ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯವರು ಪೊಲೀಸರಿಗೆ ಮಾಹಿತಿ ಕೊಟ್ಟಿರಲಿಲ್ಲ ಮತ್ತು ಪೊಲೀಸರು ಆಸ್ಪತ್ರೆಗೆ ಬಂದಿರಲಿಲ್ಲ. ಸದ್ರಿ ಆಸ್ಪತ್ರೆಯ ವೈದ್ಯರು ನನ್ನ ಗಂಡನಿಗೆ ಚಿಕಿತ್ಸೆ ಕೊಟ್ಟಿದ್ದರು. ಭಟ್ಕಳ ಸರಕಾರಿ ಆಸ್ಪತ್ರೆಗೆ ಚಾಸಾ-1 ರವರನ್ನು ಕರೆದುಕೊಂಡು ಬಂದಾಗ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ಚಾಸಾ-1 ರವರನ್ನು ದಿನಾಂಕ 24.11.2024 ರಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆನು. ಪೊಲೀಸರು ಸದ್ರಿ ದಿನ ಆಸ್ಪತ್ರೆಗೆ ಬಂದಾಗ ನಮ್ಮಿಂದು ದೂರು ಪಡೆದುಕೊಂಡಿರುವುದಿಲ್ಲ. ಘಟನೆ ಆಯಿತು ಎಂದು ಹೇಳಿದ ದಿನದಿಂದ ನನ್ನ ಗಂಡ ಚಾಸಾ-1 ರವರು ನಾಲ್ಕು ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಪೊಲೀಸರು ಆಸ್ಪತ್ರೆಗೆ ದಿನಾಂಕ 25.11.2024 ರಂದು ಬಂದಿದ್ದರು. ಕುಂದಾಪುರ ಆದರ್ಶ ಆಸ್ಪತ್ರೆಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿ ಹೊರರೋಗಿಯಾಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಮಾರನೇ ದಿನ ಚಾಸಾ-1 ರವರನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಸದ್ರಿ ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆಪಡೆದುಕೊಂಡಿರುತ್ತಾರೆ. ಮೇಲೆ ಹೇಳಿದ ಎಲ್ಲಾ ವಿಚಾರವನ್ನು ಪೊಲೀಸರಿಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ಹೇಳಿದಂತೆ ಆರೋಪಿತರು ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಮತ್ತು ಆದರ್ಶ ಮತ್ತು ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ನಾಲ್ಕು ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನಮ್ಮ ಪ್ರಕರಣದಲ್ಲಿ ಆರೋಪಿತರು ನಮ್ಮ ವಿರುದ್ದ ಸುಳ್ಳು ಸಾಕ್ಷಿ ಹೇಳಿದ್ದಕ್ಕೆ ದ್ವೇಷದಿಂದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**